ಶ್ರೀ ಪಿ. ರಾಮದೇವ್.—ನಾನು ನಿನ್ನೆ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ನಾನು ಅದನ್ನು ನೋಡಿಲ್ಲ. ಇದ್ದರೆ ನೋಡೋಣ. ಒಂದು ವೇಳೆ ತುಂಬಾ ಅರ್ಜೆಂಟ್ ವಿಷಯ ಇದ್ದರೆ ಕಳುಹಿಸಿದ ತಕ್ಷಣ ನನಗೆ ಫೋನ್ ಮಾಡಿದರೆ ಅನುಕೂಲವಾಗುತ್ತದೆ. ನಾನು ಎಲ್ಲ ಪತ್ರಿಕೆಯನ್ನೂ ನೋಡಿದ್ದೇನೆ. ನನ್ನ ಗಮನಕ್ಕೆ ಅದು ಬಂದಿಲ್ಲ. ಪುನಃ ತಾವು ಹೇಳಿದ ಮೇಲೆ ನಮ್ಮ ಕಾರ್ಯದರ್ಶಿಯವರನ್ನು ಕೇಳಿದೆ. ಅದೇನೇ ಇರಲಿ ನಾಳೆ ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಮೊದಲನೇ ದಿವಸ ತಾವು ಕನ್ನಡದಲ್ಲೇ ಎಲ್ಲಾ ಮಾಡುತ್ತೇನೆ ಎಂದು ಹೇಳಿದ್ದೀರಿ. ಆದರೆ ನಮಗೆ ಇಂಗ್ಲೀಷಿನಲ್ಲಿ ಉತ್ತರಗಳು ಬರುತ್ತವೆ. ದಯವಿಟ್ಟು ಕನ್ನಡದಲ್ಲೇ ನಮಗೆ ಕಳುಹಿಸಿ ಸ್ವಾಮಿ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರಿನಲ್ಲಿ ಫಾರ್ಮಸಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ ನಡೆಯುತ್ತಿರುವುದರ ಬಗ್ಗೆ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದು ತಮ್ಮ ಗಮನಕ್ಕೂ ಬಂದಿರಬಹುದು. ದಯವಿಟ್ಟು ಅದನ್ನು ತೆಗೆದುಕೊಳ್ಳಬೇಕು.

ಶ್ರೀ ಜೀವರಾಜ್ ಆಳ್ವ.—ವೈದ್ಯಕೀಯ ವಿದ್ಯಾರ್ಥಿಗಳ ಮುಷ್ಕರ ಮತ್ತು ಫಾರ್ಮಸಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ ಎರಡು ವಿಷಯಗಳನ್ನೂ ಸೇರಿಸಿ ಸಭೆ ಮುಂದೆ ತರಬಹುದಲ್ಲ.

ಅಧ್ಯಕ್ಷರು.—ಅವೆರೆಡೂ ಬೇರೆ ಬೇರೆ ವಿಷಯಗಳಿದ್ದಹಾಗೆ ಕಾಣುತ್ತದೆ. ನಾನು ನೋಡಿ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ನಾಳೆ ತೆಗೆದುಕೊಳ್ಳಬಹುದಲ್ಲ.

ಶ್ರೀ ಡಿ. ಜಯದೇವರಾಜ ಅರಸ್.—ನಾವು ಕಳುಹಿಸಿಕೊಡುವ ಗಮನ ಸೆಳೆಯುವ ಸೂಚನೆಗಳು ಸರಿಯಾದ ಕಾಲದಲ್ಲಿ ಬರದೇಹೋದರೆ ನಾವು ಕೇಳುತ್ತೇವೆ. ಆಮೇಲೆ ತಾವು ಗಮನಕ್ಕೆ ಬಂದಿದೆ ಎಂದು ಹೇಳಿ ನೋಡುತ್ತೇನೆ ಎಂದು ಹೇಳುತ್ತೀರಿ. ಈ ರೀತಿ ಆಗುವುದು ಬೇಡ.

ಅಧ್ಯಕ್ಷರು.—ನೀವು ೧೧–೪ಕ್ಕೆ ಬರೆದುಕೊಟ್ಟು ಆವತ್ತೇ ಪ್ರಶ್ನೋತ್ತರ ಆದತಕ್ಷಣ ಕೇಳಿದರೆ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಡಿ. ಜಯದೇವರಾಜ ಅರಸ್.—ನಾನು ಹಾಗೆ ಹೇಳುವುದಿಲ್ಲ.

ಅಧ್ಯಕ್ಷರು.—ಸದಸ್ಯರು ಕಳಿಸಿರತಕ್ಕ ಎಲ್ಲ ಗಮನ ಸೆಳೆಯುವ ಸೂಚನೆಗಳನ್ನೂ ನೋಡಿ ಅದರಲ್ಲಿ ಯಾವುದು ಪ್ರಾಮುಖ್ಯವಾದುದು ಎಂಬುದನ್ನು ಗುರುತಿಸಿ ಅದಕ್ಕೆ ತಕ್ಷಣ ಉತ್ತರ ತರಿಸತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ಪ್ರಾಮುಖ್ಯತೆ ಎಂದರೆ ಏನು ? ನಾವು ಪದೇಪದೇ ಇಲ್ಲಿ ಎದ್ದು ಹೇಳಬೇಕೆ ?

ಶ್ರೀ ಪ್ರಭಾಕರ್ ತೇಲ್‌ಕರ್.—ನಾನೂ ಒಂದು ಶಾರ್ಟ್ ನೋಟೀಸ್ ಕ್ವೆಶ್ಚನ್ ಕಳುಹಿಸಿ ಕೊಟ್ಟಿದ್ದೇನೆ. ಬಹಳ ದಿವಸವಾದರೂ ಉತ್ತರ ಬಂದಿಲ್ಲ. ಅದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು.—ನೋಡೋಣ.

PAPERS LAID ON THE TABLE

SRI DHARAM SINGH NARAYAN SINGH (Minister for Housing and Urban Development).—Sir, I beg to lay :—

Notification No HUD 302 MLR 80 dated 27th February, 1981 regarding the Karnataka Municipalties (Conditions of Service of Officers and Servants) Sixth (Amendment) Rules, 1980.

as required under Section 323 (16) of the Karnataka Municipalities Act, 1964.

ಶ್ರೀ ಬೇಗಾನೆ ರಾಮಯ್ಯ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—೧೯೫೯ನೇ ಕರ್ನಾಟಕ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಮಂಡಲಿಗಳ ಶಾಸನದ ೨೪೬ನೇ ಕಲಮಿನ ಮೇರೆಗೆ ಹೊರಡಿಸಿದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

MR. SPEAKER.—Papers laid.

CALLING ATTENTION TO MATTERS OF URGENT PUBLIC IMPORTANCE

re:–Seizure of 39 Purse–seine boats belonging to fishermen of Karnataka by the Kerala Government.

MR. SPEAKER.—Sriyuths. G. P. Vadayaraj, Mallur Ananda Rao, Harnahalli Ramaswamy, A. B. Patil, V. B. Bhavi, A. G. Kodgi, B. Subbaiah Shetty, P. Ananda Kunde Hegde, N. Bhasker Shetty and U. T. Fareed, to call the attention of the Chief Minister to seizure of 29 Purse–Seine boats belonging to fishermen of Karnataka by the Kerala Government.

ಶ್ರೀ ಎ. ಜಿ. ಕೊಡಗಿ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ,.....

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮಂಡನೆಯಾದ ಮೇಲೆ ಹೇಳಿ.

SRI M. C. BASAPPA.—He is mentioning that some names have been called and some names have been deleted.

ಅಧ್ಯಕ್ಷರು.—ಅವರಿಗೆ ಅವಸರ. ಅವರು ಹೆಸರು ಹೇಳಲಿಲ್ಲವಲ್ಲ ಎಂದು ಎದ್ದಿದ್ದಾರೆ. ನಾನು ಓದುವಾಗ ಅವರ ಹೆಸರನ್ನು ಹೇಳಿದೆ.

SRI MALLUR ANANDA RAO.—Sir, I call the attention of the Chief Minister to the seizure of 29 Purse–seine boats belonging to fishermen of Karnataka by the Kerala Government.

SRI R. GUNDU RAO (Chief Minister).—Sir, I wish to make the following statement.

It has come to the notice of the Government that about 26 Purse-seine boats belonging to Fishermen of Karnataka State were seized on 2nd March 1981 at Cochin by the Kerala Government on the allegation that they have contravened the Kerala Marine Fishing Regulation Act, 1980. The incident is learnt to have taken place while the boats were fishing off the coast of Kerala near Cochin. The report that fish worth Rs. 2 Crores were in the boats is exaggerated. The value of the fish at best would be Rs. 2 to 3 lakhs.

The Government of Karnataka has taken up the matter with the Government of Kerala to secure release of these seized boats The